ಮಳೆಧಾರೆಗೆ ಕಿಟಕಿ ಗಾಜುಗಳು ಅಸ್ಪಷ್ಟವಾಗಿ ಹೊರ ಜಗತ್ತು ಮಬ್ಬಾಗಿ ನಿಂತ ಹೊತ್ತು. ಒಳ ಜಗತ್ತು ರಾಶಿ ಕಸ ಹೊತ್ತು ಕಿಷ್ಕಿಂಧೆಯಾದ ಸಮಯ.

ಅದಾಗಲೇ ಕಂಬಳಿಹುಳ ಕೋಶ ಕಳಚಿ ಚಿಟ್ಟೆಯಾಗಿ ಹೊರ ಬಂದಿಲ್ಲವೆನ್ನುವುದು ಗೊತ್ತಾಯಿತು. ಆನಂತರ ಅಪಾರ್ಟ್‌ಮೆಂಟಿನ ನೆಲ ಕುಸಿದು ಬೀಳುವಂತಹ ಪ್ರಳಯಾಂತಕ ನೃತ್ಯವೊಂದು ಸಂಭವಿಸಿ ಹೋಯಿತು.

ಮುಚ್ಚಿದ ಕೋಣೆಯ ಬಾಗಿಲನ್ನು ಒಂದೇ ಸಮನೆ ಪರಚುತ್ತಾ ಬೆಕ್ಕು ಆರ್ತವಾಗಿ ಮೀಂಯ್‌ಗುಟ್ಟುತ್ತಿತ್ತು. ಪುರು ಬಾಗಿಲು ತೆರೆದ. ಅದು ಚೂಪಾಗಿ ಒಳ ಬಂದು ಮಂಚವೇರಿ ಕುಳಿತುಕೊಂಡಿತು. ದಿಂಬನ್ನು ಬದಿಗೆ ಸರಿಸಿ, ಅದರ ಪಕ್ಕ ಕೂತ. ಅದು ಅವನ ತೊಡೆಯೇರಿ ಮಡಿಲಲ್ಲಿ ಬೆಚ್ಚಗೆ ಮುದುರಿ ಕುಳಿತಿತು. ಪುರು ಅದರ ತಲೆ ಸವರುತ್ತಾ ಹಾಲಿಗೆ ಬಂದು ಚಾರ್ಜ್‌ಗೆ ಇಟ್ಟ ಸೆಲ್ ಫೋನ್ ಎತ್ತಿಕೊಂಡು ಮೆಸೇಜ್ ಚೆಕ್ ಮಾಡಿದ. ಮತ್ತದೇ ಉತ್ತರ. ಅವನಿಗೆ ಗೊತ್ತಿದ್ದ ಅವಳ ಯಾರ ಫ್ರೆಂಡ್ಸ್ ಮನೆಗೂ ಸುಜಾತಾ ಹೋಗಿಲ್ಲ.

'ಹೇ ಬ್ರೋ, ವಾಟ್ ಹ್ಯಾಪನ್ಡ್?' ಅಸೂಕ್ಷ್ಮ ಕಾಳಜಿಯನ್ನು ಅಕ್ಷರದಲ್ಲಿ ಬಿಂಬಿಸುವ ನಿರ್ಜೀವ ಮೆಸೇಜ್‌ಗಳು. ಇದೀಗ ಸಾವಿರದ ಅದೆಷ್ಟನೇದೋ ಬಾರಿ ಮತ್ತೆ ಸುಜಾತಾಳಿಗೆ ಫೋನ್ ಮಾಡಿದ. ಕಾಲ್ ಎಂಡೆಡ್ ಎಂದು ಸಾವಿರದ ಅದೆಷ್ಟನೇದೋ ಬಾರಿ ಮತ್ತದೇ ಮೆಸೇಜ್ ಬಂದಿದ್ದು ನೋಡಿ ಫೋನ್ ಎಸೆಯಲಿಲ್ಲ. ಮತ್ತೆ ಅದೆಷ್ಟನೇದೋ ಬಾರಿ ಅವಳ ಫೇಸ್‌ಬುಕ್ ಅಕೌಂಟ್ ತೆರೆಯಲು ಪ್ರಯತ್ನಿಸಿದ. ಮೂರು ದಿನದ ಹಿಂದೆ ಡಿಆಕ್ಟಿವೇಟಾಗಿದ್ದ ಅಕೌಂಟ್ ಹೆಣದಂತೆ ತಣ್ಣಗಿತ್ತು. ಎಲ್ಲಾ ನೆನಪುಗಳನ್ನೂ ಅಳಿಸಿ ಹೋಗಿದ್ದಳು.

'ಮಧ್ಯಾಹ್ನದಿಂದಾ ಏನೂ ತಿಂದಿಲ್ಲ. ಹಸಿವೇನೋ?' ಬೆಕ್ಕನ್ನು ಎದೆಗವಚಿ, ಮುದ್ದುಗರೆಯುತ್ತಾ ಪುರು ಕೇಳಿದ. ಅದು ಅವನ ಮುಖವನ್ನು ಬಳಚಿ ನೆಕ್ಕ ತೊಡಗಿತು.

'ಹೇಳೋ ಪುಟ್ಟಾ, ಹಾಗಾದರೆ ನಾನು ಸುಜಾತಾಳನ್ನು ಪ್ರೀತಿಸಿರಲಿಲ್ಲವಾ?'

ಬೆಕ್ಕು ಅವನ ಕೈಯೊಳಗೆ ಮತ್ತಷ್ಟು ಮುದುರಿಕೊಳ್ಳುತ್ತಾ, ಕಣ್ಣು ಮುಚ್ಚಿ ಉದಾಸೀನದಿಂದ 'ಮಿಯಾಂವ್!' ಅಂದಿತು.

## ಜಯಶ್ರೀ ಕಾಸರವಳ್ಳಿ

ಸೂಕ್ಷ್ಮಸಂವೇದನೆಯ ಕನ್ನಡ ಕತೆಗಾರ್ತಿ ಜಯಶ್ರೀ ಅವರ ಕಥಾಸಂಗ್ರಹಗಳು: 'ತಂತಿ ಬೇಲಿಯ ಒಂಟಿ ಕಾಗೆ', 'ದಿನಚರಿಯ ಕಡೇ ಪುಟದಿಂದ...' ಲ್ಯಾಟಿನ್ ಅಮೆರಿಕದ ಬರಹಗಾರ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್ ಕತೆಗಳನ್ನು ಅವರು ಕನ್ನಡಕ್ಕೆ ತಂದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.